# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 152(228)
2) ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ : 11.07.2018
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗುರುತಿಸಿರುವ ಒಟ್ಟು ಆನೆಗಳ ಸಂಖ್ಯೆ ಎಷ್ಟು; ಯಾವ ಯಾವ ಪ್ರದೇಶದಲ್ಲಿ ಆನೆಗಳಿವೆ ಎಂದು ಗುರುತಿಸಲಾಗಿದೆ; | 2012–13ನೇ ಸಾಲಿನಲ್ಲಿ ಕೈಗೊಂಡ ಆನೆ ಗಣತಿ ಪ್ರಕಾರ ರಾಜ್ಯದಲ್ಲಿ ಒಟ್ಟು 6072 ಆನೆಗಳು ಕಂಡುಬಂದಿರುತ್ತವೆ. ಪ್ರಸ್ತುತ 2017–18 ನೇ ಸಾಲಿನಲ್ಲಿ ಆನೆ ಗಣತಿ ಕಾರ್ಯ ಕೈಗೊಂಡಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.<br>ರಾಜ್ಯದಲ್ಲಿ ಮೈಸೂರು, ಮಡಿಕೇರಿ, ಚಾಮರಾಜನಗರ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಉತ್ತರಕನ್ನಡ, ಮಂಗಳೂರು, ರಾಮನಗರ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರದೇಶಗಳ ವ್ಯಾಪ್ತಿಯಲ್ಲಿ ಆನೆಗಳು ಹೆಚ್ಚಾಗಿರುವುದನ್ನು ಗುರುತಿಸಲಾಗಿದೆ. |
| ಆ) | ಆನೆಯ ಹಾವಳಿಯಿಂದ ಕೃಷಿ ನಷ್ಟಕ್ಕೆ ಗುರಿಯಾದ ರೈತರಿಗೆ ಪರಿಹಾರ ಒದಗಿಸಲಾಗಿದೆಯೇ; ಒದಗಿಸಿದ್ದಲ್ಲಿ ಎಷ್ಟು ಪರಿಹಾರ ನೀಡಲಾಗಿದೆ; (ವಿವರ ನೀಡುವುದು) | ಹೌದು.<br>ಸರ್ಕಾರದ ದಿನಾಂಕ:30.04.2011ರ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010 ಹಾಗೂ ದಿನಾಂಕ:05.06.2009ರ ಪತ್ರಗಳಲ್ಲಿ ವಿವಿಧ ಬೆಳೆಗಳಿಗೆ ನಿಗದಿಪಡಿಸಿರುವ ದರದಂತೆ ಬೆಳೆನಾಶ ಪ್ರಕರಣಗಳಿಗೆ ಈ ಕೆಳಕಂಡಂತೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.<br>ಅ. ರೂ.7,500/– ವರೆಗಿನ ಮೊತ್ತದ ಬೆಳೆನಾಶಕ್ಕೆ ಬೆಳೆನಾಶದ ಪೂರ್ಣ ಮೊತ್ತ.<br>ಆ. ರೂ.7,500/– ಗಳಿಗೆ ಮೇಲ್ಪಟ್ಟ ಹಾಗೂ ರೂ.35,000/– ಗಳವರೆಗಿನ ಮೊತ್ತದ ಬೆಳೆನಾಶಕ್ಕೆ ಶೇಕಡ 50 ರಷ್ಟು ಪರಿಹಾರ ಧನ ಕನಿಷ್ಠ ರೂ.7,500/–ಮತ್ತು ಗರಿಷ್ಠ ರೂ.21,250/–.<br>ಇ. ರೂ.35,000/–ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡ 30 ರಷ್ಟು ಪರಿಹಾರ ಧನ, ಕನಿಷ್ಠ ರೂ. 21,250/– ಮತ್ತು ಗರಿಷ್ಠ ರೂ. 50,000/–<br>ಮುಂದುವರೆದು, ಸರ್ಕಾರದ ದಿನಾಂಕ: 19.09.2016ರ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯುಎಲ್ 2016ರಲ್ಲಿ ಈ ಹಿಂದೆ ದಿನಾಂಕ: 05.06.2009ರಲ್ಲಿ ವಿವಿದ ಬೆಳೆಗಳಿಗೆ ನಿಗದಿಪಡಿಸಿರುವ ದರಗಳನ್ನು ದ್ವಿಗುಣಗೊಳಿಸಿದ್ದು, ಅದರಂತೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ. |
| ಇ) | ಆನೆಯ ಆಕ್ರೋಶಕ್ಕೆ ಎಷ್ಟು ಮನುಷ್ಯರು ಸಾವನ್ನಪ್ಪಿದ್ದಾರೆ; ಆ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೇ; ಆನೆಗಳು ನಾಡಿಗೆ ಬರದಂತೆ ತಡೆಯಲು ಇಲಾಖೆ ಕೈಗೊಂಡ ಕ್ರಮಗಳೇನು; ಇದಕ್ಕಾಗಿ ಇಲಾಖೆ ಖರ್ಚು ಮಾಡಿದ ಹಣ ಎಷ್ಟು; ಯಾವ ಮಾದರಿಯಲ್ಲಿ ತಡೆ ಬೇಲಿಗಳನ್ನು ರಚಿಸಲಾಗಿದೆ? (ವಿವರ ನೀಡುವುದು) | ಕಾಡಾನೆ ಹಾವಳಿಯಿಂದ ಉಂಟಾದ ಮಾನವ–ಪ್ರಾಣ ಹಾನಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಪಾವತಿಸಲಾದ ದಯಾತ್ಮಕ ಧನದ ವಿವರ ಈ ಕೆಳಕಂಡಂತಿದೆ.<br>(ರೂ. ಲಕ್ಷಗಳಲ್ಲಿ)<br>ವರ್ಷ / ಪ್ರಕರಣ / ಮೊತ್ತ<br>2015–16 / 30 / 150.00<br>2016–17 / 38 / 190.00<br>2017–18 / 22 / 110.00 |

ಆನೆಗಳು ನಾಡಿಗೆ ಬರದಂತೆ ತಡೆಯಲು ಇಲಾಖಾ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1) ಸುಧಾರಿತ ಸೌರಶಕ್ತಿ ಬೇಲಿ ನಿರ್ಮಾಣ/ ನಿರ್ವಹಣೆ
2) ಆನೆ ತಡೆ ಕಂದಕ ನಿರ್ಮಾಣ/ನಿರ್ವಹಣೆ
3) ವನ್ಯಜೀವಿಗಳಿಗೆ ಕುಡಿಯುವ ನೀರಿಗಾಗಿ ಕೆರೆಗಳ ನಿರ್ಮಾಣ/ ನಿರ್ವಹಣೆ
4) ಕಳ್ಳಬೇಟೆ ತಡೆ ಶಿಬಿರಗಳಿಗೆ ಹಾಗೂ Rapid Response Teams (RRT)ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳಿಗೆ Wireless Networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.
5) ಕಾಡಾನೆ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.
6) ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.
7) ಆನೆಗಳ ಹಾವಳಿ ಹೆಚ್ಚಾಗಿರುವ ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ 08 ಆನೆ ಗುಂಪುಗಳ ಪೈಕಿ ಒಂದೊಂದು ಗುಂಪಿನ ಒಂದು ವಯಸ್ಕ ಹೆಣ್ಣಾನೆಗೆ ರೇಡಿಯೋ ಕಾಲರ್ ಅಳವಡಿಸಿ, 24 ಗಂಟೆ ಆನೆಹಿಂಡಿನ ಚಲನವಲನಗಳ ಮೇಲೆ ನಿಗಾ ವಹಿಸಿ, ಸದರಿ ಆನೆಗಳು ಯಾವ ಯಾವ ಪ್ರದೇಶಗಳಲ್ಲಿ ಚಲಿಸುತ್ತಿವೆ ಎಂಬ ವಿಷಯವನ್ನು ಎಸ್.ಎಂ.ಎಸ್. ಮುಖಾಂತರ ಸ್ಥಳೀಯ ಜನರಿಗೆ ಆಗಿಂದಾಗ್ಗೆ ಮಾಹಿತಿ ನೀಡಲಾಗುತ್ತಿದೆ.
8) ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಕಾಡಾನೆಗಳನ್ನು ಸೆರೆಹಿಡಿದು ಆಗಿಂದಾಗ್ಗೆ ಆನೆ ಶಿಬಿರಗಳಿಗೆ ಕಳುಹಿಸಲಾಗಿರುತ್ತದೆ.
9) ರೈತರಿಗೆ ಸೋಲಾರ್ ಬೇಲಿ ನಿರ್ಮಾಣಕ್ಕೆ ಶೇ 50ರಷ್ಟು ಧನ ಸಹಾಯವನ್ನು ಇಲಾಖೆಯಿಂದ ನೀಡಲಾಗುತ್ತಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಾನವ – ವನ್ಯಪ್ರಾಣಿ ಸಂಘರ್ಷ ನಿಯಂತ್ರಿಸಲು ವೆಚ್ಚ ಮಾಡಲಾದ ಅನುದಾನದ ವಿವರ ಕೆಳಗಿನಂತಿದೆ.

| ಕ್ರ ಸಂ. | ಯೋಜನೆ | ವೆಚ್ಚ (ರೂ. ಲಕ್ಷಗಳಲ್ಲಿ) | | | |
|---|---|---|---|---|---|
| | | 2015–16 | 2016–17 | 2017–08 | 2018–19 (ಹಂಚಿಕೆ ಮಾಡಿದ ಅನುದಾನ ) |
| 1. | ಆನೆ ಯೋಜನೆ | 178.65 | 400.820 | 370.578 | 684.53 |
| 2. | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ–ವನ್ಯಪ್ರಾಣಿ ಸಂಘರ್ಷ ನಿಯಂತ್ರಣ–139–ಪ್ರಧಾನ ಕಾಮಗಾರಿಗಳು | – | – | 7,773.31 | 7,612.00 |
| 3. | 50:50 ಅನುಪಾತದಲ್ಲಿ ಸೌರತಂತಿ ಬೇಲಿ ನಿರ್ಮಾಣ | 32.72 | 25.860 | 24.87 | 25.00 |
| 4. | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ | 1,186.75 | 2,686.300 | – | – |
| 5. | ಮಾನವ–ವನ್ಯಪ್ರಾಣಿ ಸಂಘರ್ಷ ನಿಯಂತ್ರಣಕ್ಕೆ ಧೀರ್ಘಾವಧಿ ಕ್ರಮಗಳು | 8,364.37 | 4,978.520 | – | – |
| | Total: | 9,762.49 | 8,091.50 | 8,168.76 | 8,321.53 |

ಕಾಡಾನೆಗಳು ನಾಡಿಗೆ ಬರದಂತೆ ಸೌರಶಕ್ತಿ ಬೇಲಿ, ಆನೆ ತಡೆ ಕಂದಕ ಹಾಗು ರೈಲ್ವೆ ಕಂಬಿ ತಡೆ ಬೇಲಿಗಳ ಮಾದರಿಯಲ್ಲಿ ತಡೆ ಬೇಲಿಗಳನ್ನು ನಿರ್ಮಿಸಿ ನಿರ್ವಹಿಸಲಾಗುತ್ತಿದೆ.

ಸಂಖ್ಯೆ: ಅಪಜೀ 118 ಎಫ್‌ಡಬ್ಲ್ಯೂಎಲ್ 2018

(ಆರ್.ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು